<u>ಕರ್ನಾಟಕ ಲೋಕಾಯುಕ್ತ</u>

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ/19/2019/ಎಆರ್‌ಇ–20

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು–560 001,
ದಿನಾಂಕ:01–09–2022

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (3) ಅನ್ವಯ ವರದಿ**

ವಿಷಯ: 1ನೇ ಎದುರುದಾರರಾದ ಶ್ರೀ ಶ್ರೀನಿವಾಸಮೂರ್ತಿ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಮತ್ತು 2ನೇ ಎದುರುದಾರರಾದ ಶ್ರೀ ಪದ್ಮನಾಭ.ಡಿ.ಎಂ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೂದಿಹಾಳ್ ಗ್ರಾಮ ಪಂಚಾಯಿತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರುಗಳ ದುರ್ನಡತೆ/ಕರ್ತವ್ಯ ಲೋಪದ ಕುರಿತು.

#####

ಶ್ರೀ ಸುನೀಲ್ ಕುಮಾರ್.ಎಂ. ನಂ.49/5, 6ನೇ ಅಡ್ಡ ರಸ್ತೆ, 3ನೇ ಮುಖ್ಯ ರಸ್ತೆ, ಕಂಠೀರವ ನಗರ, ನಂದಿನ ಲೇಔಟ್, ಬೆಂಗಳೂರು ಇವರು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು 1ನೇ ಎದುರುದಾರರಾದ ಶ್ರೀ ಶ್ರೀನಿವಾಸಮೂರ್ತಿ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಮತ್ತು 2ನೇ ಎದುರುದಾರರಾದ ಶ್ರೀ ಪದ್ಮನಾಭ.ಡಿ.ಎಂ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೂದಿಹಾಳ್ ಗ್ರಾಮ ಪಂಚಾಯಿತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರುಗಳ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9ರಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

**2. ದೂರಿನ ಸಂಕ್ಷಿಪ್ತ ವಿವರಣೆ:**

ಸದರಿ ದೂರಿನಲ್ಲಿ ನೆಲಮಂಗಲ ತಾಲ್ಲೂಕು ಬೂದಿಹಾಳ ಪಂಚಾಯಿತಿ ವ್ಯಾಪ್ತಿಯಲ್ಲಿ ನೂರಾರು ಕೈಗಾರಿಕೆಗಳು ಮತ್ತು ಗೋದಾಮುಗಳಿದ್ದು ತೆರಿಗೆ ಸಂಗ್ರಹದಲ್ಲಿ ಎದುರುದಾರರು ಅವ್ಯವಹಾರ ಮಾಡುತ್ತಿರುವ ಬಗ್ಗೆ ಸಾರ್ವಜನಿಕರಿಂದ ಮಾಹಿತಿ ಬಂದಿದ್ದರಿಂದ ಬೂದಿಹಾಳ ಪಂಚಾಯಿತಿಗೆ ಮಾಹಿತಿ ಹಕ್ಕು ಅಧಿನಿಯಮದಡಿ ಕೈಗಾರಿಕೆಗಳು ಮತ್ತು ಗೋದಾಮುಗಳು ಬಾಕಿ ಉಳಿಸಿಕೊಂಡಿರುವ ಮತ್ತು ಸಂಗ್ರಹಿಸಲಾಗಿರುವ ಕಂದಾಯದ ವಿವರ ಕೇಳಿ ಅರ್ಜಿ ಸಲ್ಲಿಸಿದಾಗ ಎದುರುದಾರರು ಕಂದಾಯ ಬಾಕಿ ಉಳಿಸಿಕೊಂಡಿರುವ ಸುಸ್ತಿದಾರರ ಪಟ್ಟಿ ನೀಡದೇ ಬದಲಾಗಿ ಭೂಪರಿವರ್ತನಾ ಆದೇಶ, ನೊಂದಾಯಿತ ಮೂಲ ಪತ್ರ ಹಾಗೂ ಇತರೆ ತಪ್ಪು ಮಾಹಿತಿ ನೀಡಿರುತ್ತಾರೆಂದು ಆಪಾದಿಸಿರುತ್ತಾರೆ. ಮುಂದುವರೆದು, ವಾರ್ಷಿಕ ತೆರಿಗೆ ಸಂಗ್ರಹ 10 ಕೋಟಿಗೂ ಹೆಚ್ಚಾಗಿದ್ದು ಪಂಚಾಯಿತಿಯವರು

ಸರ್ಕಾರಕ್ಕೆ ಕೆಲವೇ ಲಕ್ಷ ಮಾತ್ರ ತೋರಿಸಿ ಬಾಕಿ ಹಣವನ್ನು ಎದುರುದಾರರು ಕೈಗಾರಿಕೆಗಳು ಮತ್ತು ಗೋದಾಮುಗಳ ಮಾಲೀಕರಿಂದ ವಸೂಲಿ ಮಾಡದೇ ಭಾರಿ ಅವ್ಯವಹಾರ ನಡೆಸುತ್ತಿದ್ದಾರೆಂದು ಆಪಾದಿಸಿ ಸುಸ್ತಿದಾರರಿಂದ ಕಂದಾಯ ವಸೂಲಿ ಮಾಡಲು ಅವಕಾಶವಿದ್ದರೂ ಮಾಲೀಕರ ಜೊತೆ ಹೊಂದಾಣಿಕೆ ಮಾಡಿಕೊಂಡು ಸರ್ಕಾರಕ್ಕೆ ಮೋಸ ಮಾಡುತ್ತಿದ್ದು ಕ್ರಮಕೈಗೊಳ್ಳಲು ಕೋರಿರುವುದು ಕಂಡುಬರುತ್ತದೆ.

**3. ಎದುರುದಾರರ ಆಕ್ಷೇಪಣೆ:**

1 ಮತ್ತು 2ನೇ ಎದುರುದಾರರಾದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ದಿನಾಂಕ:26-02-2019ರಂತೆ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸರ್ಕಾರದ ಸುತ್ತೋಲೆ ಸಂಖ್ಯೆ.ನಂ.ಗ್ರಾ.ಅಪ/09/ಗ್ರಾಪಂಅ/2016 ದಿನಾಂಕ:16-04-2016ರಂತೆ ಕೈಗಾರಿಕೆ ಮತ್ತು ಗೋದಾಮುಗಳ ಅಳತೆ ಮಾಡಿ ಸುತ್ತೋಲೆ ಪತ್ರದಂತೆ ಕಂದಾಯವನ್ನು ನಿಗಧಿಪಡಿಸಿ ನೋಟೀಸ್ ಜಾರಿ ಕಂದಾಯವನ್ನು ವಸೂಲಿ ಮಾಡಿರುವುದಾಗಿ 2016-17ನೇ ಸಾಲಿನಲ್ಲಿ ಹಿಂದೆ ಇದ್ದ ಆಯವ್ಯಯಕ್ಕಿಂತ ಶೇಕಡಾ 150ರಷ್ಟು ಹೆಚ್ಚಿಗೆ ತಯಾರಿಸಲಾಗಿರುತ್ತದೆ ಎಂದು, ಭೂಪರಿವರ್ತನೆಯಾಗಿರುವ ಕೈಗಾರಿಕೆ ಗೋದಾಮುಗಳಿಗೆ ಸುತ್ತೋಲೆಯಂತೆ ಕಂದಾಯ ನಿಗಧಿಪಡಿಸಿದ್ದು, ಎಲ್ಲಾ ಕೈಗಾರಿಕೆ ಗೋದಾಮುಗಳಿಂದ ಚೆಕ್/ಡಿಡಿ ಮುಖಾಂತರವೇ ಕಂದಾಯ ವಸೂಲಾತಿ ಮಾಡಿದ್ದು, ಗ್ರಾಮ ಪಂಚಾಯಿತಿಯಲ್ಲಿ ಕೈಬರಹದ ರಸೀದಿಯನ್ನು ಕೊಡಲು ಮಾತ್ರ ಸರ್ಕಾರ ಆದೇಶ ಮಾಡಿರುವುದಾಗಿ ತಿಳಿಸಿರುತ್ತಾರೆ. ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ನೀಡಿರುವ ದಾಖಲೆಗಳನ್ನು ನೀಡಿದ್ದು ಯಾವುದೇ ತಪ್ಪು ಮಾಹಿತಿ ನೀಡಿರುವುದಿಲ್ಲ. ತಪ್ಪು ಮಾಹಿತಿ ನೀಡಿದ್ದರೆ ಮೇಲ್ಮನವಿಯನ್ನು ಆಯೋಗಕ್ಕೆ ಸಲ್ಲಿಸಬೇಕಾಗಿರುತ್ತದೆ ಎಂದು ತಿಳಿಸುತ್ತಾ, ದೂರನ್ನು ವಜಾ ಮಾಡಲು ಕೋರಿರುತ್ತಾರೆ.

ದೂರುದಾರರು ಪ್ರತ್ಯುತ್ತರದಲ್ಲಿ ವಾಣಿಜ್ಯ ಉದ್ದೇಶಕ್ಕೆ ವಿದ್ಯುತ್ ಸಂಪರ್ಕ ಪಡೆದಿರುವ ಕೈಗಾರಿಕೆ ಮತ್ತು ಗೋದಾಮುಗಳ ಪಟ್ಟಿ ತರಿಸಿಕೊಂಡು ನೆಲಮಂಗಲ ಬೆಸ್ಕಾಂ ಕಛೇರಿಯಿಂದ ಅಧಿಕೃತ ಮಾಹಿತಿ ಪಡೆಯಬೇಕೆಂದು, ಆಯವ್ಯಯ ಶೇಕಡಾ 150ರಷ್ಟು ಹೆಚ್ಚು ಮಾಡಿರುವುದನ್ನು ಯಾವ ಆದಾಯದ ಮೂಲದಿಂದ ಹೊಂದಾಣಿಕೆ ಮಾಡಲಾಗಿದೆ ಎಂಬುದರ ವಿವರಣೆ ನೀಡಿಲ್ಲವೆಂದು, ಹಿಂದಿನ ವರ್ಷ ಎಷ್ಟು ಕಂದಾಯ ಸಂಗ್ರಹಿಸಲಾಗಿದೆ ಎಂಬುದರ ದಾಖಲೆ ಕೊಟ್ಟಿಲ್ಲವೆಂದು, ಹಿಂದಿನ ವರ್ಷ ಬಂದಷ್ಟೇ ಈ ಸಾಲಿನಲ್ಲಿ ಆದಾಯ ಬರುತ್ತದೆ, ಹೆಚ್ಚು ಮಾಡಿರುವ ಮೊತ್ತವನ್ನು ಹೇಗೆ ಹೊಂದಿಸುತ್ತೀರಿ ಎಂಬುದರ ವಿವರಣೆ ಕೊಟ್ಟಿಲ್ಲವೆಂದು ತಿಳಿಸಿರುತ್ತಾರೆ.

ದೂರುದಾರರು ಮಾಡಿರುವ ಆಪಾದನೆ, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆ, ದೂರುದಾರರು ಸಲ್ಲಿಸಿರುವ ಪ್ರತ್ಯುತ್ತರ ಹಾಗೂ ಎದುರುದಾರರು ಸಲ್ಲಿಸಿರುವ ವರದಿ/ಅನುಪಾಲನಾ ವರದಿಗಳಿಂದ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ.

1) ದೂರುದಾರರು ಘನ ಲೋಕಾಯುಕ್ತ ಸಂಸ್ಥೆಯಲ್ಲಿ ದಿನಾಂಕ:02-01-2019ರಂದು ದೂರು ಸಲ್ಲಿಸಿದ್ದು ದೂರು ಸಲ್ಲಿಸುವ ದಿನಾಂಕದವರೆಗೆ 1 ರಿಂದ 2ನೇ ಎದುರುದಾರರು ಕೈಗಾರಿಕೆಗಳಿಂದ ಮತ್ತು ಗೋದಾಮುಗಳಿಂದ 2016-17 ಮತ್ತು 2017-18ನೇ ಸಾಲಿನಲ್ಲಿ ಅಂದರೆ ಕೈಗಾರಿಕೆಯಿಂದ ಮತ್ತು ಗೋದಾಮುಗಳಿಂದ ರೂ.2,14,82,731/- ಮತ್ತು ರೂ.12,72,928/-ಗಳ ತೆರಿಗೆ ಬಾಕಿ ಉಳಿಸಿಕೊಂಡಿರುವುದು ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯಿಂದ ಕಂಡುಬರುತ್ತದೆ.

2) ಎದುರುದಾರರು 2018-19ನೇ ಸಾಲಿನಲ್ಲಿ ಕೈಗಾರಿಕೆಗಳಿಂದ ಮತ್ತು ಗೋದಾಮುಗಳಿಂದ ಬರಬೇಕಾಗಿರುವ ತೆರಿಗೆ ಹಣ, ವಸೂಲು ಮಾಡಿರುವ ತೆರಿಗೆ ಹಣದ ಬಗ್ಗೆ ಯಾವುದೇ ಮಾಹಿತಿಯನ್ನು ಸಲ್ಲಿಸದೇ ಇರುವುದರಿಂದ 2018-19ನೇ ಸಾಲಿನಲ್ಲಿ ವಸೂಲಿ ಮಾಡಿರುವ ತೆರಿಗೆ ಹಣದ ಬಗ್ಗೆ ಅನುಮಾನ ಮೂಡುತ್ತದೆ.

3) 2019ರಲ್ಲಿ ದೂರುದಾರರು ದೂರನ್ನು ಘನ ಲೋಕಾಯುಕ್ತ ಸಂಸ್ಥೆಯಲ್ಲಿ ಕೊಡುವವರೆಗೂ ಎದುರುದಾರರು ತೆರಿಗೆ ವಸೂಲಾತಿ ಮಾಡುವಲ್ಲಿ ಯಾವುದೇ ಕ್ರಮವನ್ನು ಕೈಗೊಳ್ಳದೇ ಇರುವುದು ಸಾಬೀತಾಗಿರುತ್ತದೆ.

4) ಕೈಗಾರಿಕೆ ಮತ್ತು ಗೋದಾಮುಗಳ ಮಾಲೀಕರುಗಳು ತೆರಿಗೆ ಹಣವನ್ನು ಪಾವತಿಸದೇ ಇದ್ದಲ್ಲಿ ಮೇಲಾಧಿಕಾರಿಗಳಿಗೆ ಪತ್ರ ಬರೆದು ಕೈಗಾರಿಕೆ ಮತ್ತು ಗೋದಾಮುಗಳ ಮಾಲೀಕರುಗಳ ವಿರುದ್ಧ ಕಾನೂನಿನ ಕ್ರಮಕೈಗೊಳ್ಳಬಹುದಾಗಿದ್ದರೂ ಯಾವುದೇ ಪತ್ರ ವ್ಯವಹಾರ ಮಾಡಿರುವುದು ಕಂಡುಬಂದಿರುವುದಿಲ್ಲ.

5) ಕೈಗಾರಿಕೆಗಳ ಮತ್ತು ಗೋದಾಮುಗಳ ಮಾಲೀಕರುಗಳು ತೆರಿಗೆ ಹಣವನ್ನು ಕಟ್ಟದೇ ಇದ್ದಲ್ಲಿ ಗ್ರಾಮ ಪಂಚಾಯಿತಿವತಿಯಿಂದ ನೀಡಲಾಗಿದ್ದ ಮೂಲ ಭೂತ ಸೌಕರ್ಯಗಳನ್ನು ರದ್ದುಗೊಳಿಸುವ ಕ್ರಮವನ್ನು ಕೈಗೊಳ್ಳಬಹುದಾಗಿದ್ದರೂ ಕ್ರಮವನ್ನು ಕೈಗೊಂಡಿರುವುದಿಲ್ಲ.

6) ದೂರುದಾರರು ಲೋಕಾಯುಕ್ತ ಸಂಸ್ಥೆಗೆ ದೂರನ್ನು ದಾಖಲಿಸಿದ ಬಳಿಕ ಲೋಕಾಯುಕ್ತದಿಂದ ತೆರಿಗೆ ಹಣ ವಸೂಲಾತಿಯ ಬಗ್ಗೆ ಮಾಹಿತಿ ಕೇಳಿದ ನಂತರದಲ್ಲಿ ಎದುರುದಾರರು ಎಚ್ಚೆತ್ತು ತೆರಿಗೆ ಹಣವನ್ನು ವಸೂಲಿ ಮಾಡಿರುವುದು ಹಾಗೂ ತಗಾದೆ ನೋಟೀಸ್‌ಗಳನ್ನು ಜಾರಿ ಮಾಡಿರುವುದು ಕಂಡುಬರುತ್ತದೆ.

7) ಎದುರುದಾರರು ತೆರಿಗೆಯನ್ನು ಬಾಕಿ ಉಳಿಸಿಕೊಂಡಿರುವ ಕೈಗಾರಿಕೆ ಮತ್ತು ಗೋದಾಮುಗಳ ಮಾಲೀಕರುಗಳ ವಿರುದ್ಧ ಕೈಗೊಂಡಿರುವ ಕ್ರಮದ ಬಗ್ಗೆ ಯಾವುದೇ ಮಾಹಿತಿಯನ್ನು ಸಲ್ಲಿಸಿರುವುದಿಲ್ಲ.

8) ಎದುರುದಾರರು ವಸೂಲಾತಿ ಮಾಡಿರುವ ತೆರಿಗೆ ಹಣವನ್ನು ಅಂದರೆ ಚೆಕ್/ಡಿಡಿ ಗಳನ್ನು ಯಾವ ದಿನಾಂಕದಂದು ಪಡೆಯಲಾಗಿದೆ? ಯಾವ ದಿನಾಂಕದಂದು ಪಂಚಾಯಿತಿ ಖಾತೆಗೆ ಜಮೆ ಮಾಡಲಾಗಿದೆ? ಜಮೆ ಮಾಡಲಾದ ಚೆಕ್ಕುಗಳಲ್ಲಿ ಎಷ್ಟು ಚೆಕ್ಕುಗಳು ಬ್ಯಾಂಕ್ ಖಾತೆಯಲ್ಲಿ ನಗದೀಕರಣವಿಲ್ಲದೆ ವಾಪಸ್ಸು ಬಂದಿದೆ? ಈ ರೀತಿ ವಾಪಸ್ಸು ಬಂದ ಚೆಕ್ಕುಗಳಿಗೆ ಸಂಬಂಧಿಸಿದಂತೆ ಮಾಲೀಕರ ವಿರುದ್ಧ ಯಾವ ಕ್ರಮಕೈಗೊಳ್ಳಲಾಗಿದೆ ಎಂಬುದರ ಯಾವುದೇ ಮಾಹಿತಿ ಹಾಗೂ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

9) ಎದುರುದಾರರು ಚೆಕ್ಕು/ಡಿಡಿಗಳನ್ನು ಜಮೆ ಮಾಡಿದ ಬ್ಯಾಂಕ್ ಖಾತೆ ಸಂಖ್ಯೆ, ಬ್ಯಾಂಕಿನ ಹೆಸರು, ಬ್ಯಾಂಕಿನ ಪಾಸ್ ಶೀಟ್ ಇವುಗಳ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿರುವುದಿಲ್ಲ.

10) ಎದುರುದಾರರು ಹಾಜರುಪಡಿಸಿರುವ ಕೈಗಾರಿಕೆ ಮತ್ತು ಗೋದಾಮುಗಳ ಪಟ್ಟಿಯಲ್ಲಿ ಹೊಸದಾಗಿ ಸೇರ್ಪಡೆಯಾಗಿರುವ ಅಥವಾ ಮುಚ್ಚಿರುವ ಕೈಗಾರಿಕೆ ಮತ್ತು ಗೋದಾಮುಗಳ ಹೆಸರುಗಳನ್ನು ಸ್ಪಷ್ಟವಾಗಿ ನಮೂದು ಮಾಡಿರುವುದಿಲ್ಲ.

11) ಎಲ್ಲಾ ಕೈಗಾರಿಕೆಗಳು ಮತ್ತು ಗೋದಾಮುಗಳು ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ಪಡೆದುಕೊಂಡಿರುವ ಟ್ರೇಡ್ ಲೈಸೆನ್ಸ್, ಅಗ್ನಿಶಾಮಕ ದಳದವರು ನೀಡಿರುವ ಪ್ರಮಾಣಪತ್ರ, ಅನ್ನು ಹಾಜರುಪಡಿಸಿರುವುದಿಲ್ಲ.

12) ಪಂಚಾಯಿತಿ ವ್ಯಾಪ್ತಿಯಲ್ಲಿ ದಿನಾಂಕ:30-06-2022ರವರೆಗೆ ಬಾಕಿ ಉಳಿಸಿಕೊಂಡಿರುವ ತೆರಿಗೆ ಹಣವನ್ನು ವಸೂಲಿ ಮಾಡಲು ಕೈಗೊಂಡ ಕ್ರಮದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

13) ಒಟ್ಟಾರೆಯಾಗಿ ಎದುರುದಾರರು ಕಾಲಕಾಲಕ್ಕೆ ಕೈಗಾರಿಕೆ ಮತ್ತು ಗೋದಾಮುಗಳಿಂದ ತೆರಿಗೆ ಹಣವನ್ನು ವಸೂಲಿ ಮಾಡದೇ ಇರುವುದು ಸದರಿಯವರ ಬೇಜವಾಬ್ದಾರಿತನವನ್ನು ಎತ್ತಿ ತೋರಿಸುತ್ತದೆ.

14) ನಿಗಧಿತ ಅವಧಿಯೊಳಗೆ ತೆರಿಗೆ ಹಣವನ್ನು ವಸೂಲು ಮಾಡದೇ ಇರುವುದರಿಂದ ಗ್ರಾಮ ಪಂಚಾಯಿತಿಯಲ್ಲಿನ ಆಯವ್ಯಯಕ್ಕೆ ಹಣವನ್ನು ಒದಗಿಸುವ ಪ್ರಕ್ರಿಯೆಯಲ್ಲಿ ಹಿನ್ನೆಡೆ ಉಂಟಾಗಿರುತ್ತದೆ. ಈ ರೀತಿ ಹಿನ್ನೆಡೆಯಿಂದ ಗ್ರಾಮ ಪಂಚಾಯಿತಿಯಿಂದ ಕೈಗೊಳ್ಳುವ ಕಾಮಗಾರಿಗಳಿಗೆ ಹಣದ ಕೊರತೆ ಉಂಟಾಗಿರುತ್ತದೆ.

15) ಗ್ರಾಮ ಪಂಚಾಯಿತಿಯಲ್ಲಿ ಕೈಬರಹದ ರಸೀದಿ ಕೊಡಲು ಸರ್ಕಾರ ಆದೇಶ ಇರುವುದಾಗಿ ಇಲ್ಲಿಯವರೆಗೆ ಎದುರುದಾರರು ಕೈಬರಹದಲ್ಲಿ ನೀಡಿರುವ ರಸೀದಿಗಳ ಮಾಹಿತಿ ಹಾಗೂ ಅವುಗಳ ಜೆರಾಕ್ಸ್ ಪ್ರತಿಗಳನ್ನು ಹಾಜರುಪಡಿಸಿರುವುದಿಲ್ಲ.

16) ಎದುರುದಾರರು ಯಾವುದೇ ಸ್ಪಷ್ಟ ನಿರ್ಣಯವನ್ನು ಕೈಗೊಳ್ಳದೇ ಮನಸ್ಸೋ ಇಚ್ಛೆ ತೆರಿಗೆಯನ್ನು ವಸೂಲಾತಿ ಮಾಡುತ್ತಿರುವುದು ಎದುರುದಾರರು ಸಲ್ಲಿಸಿರುವ ಉತ್ತರಗಳಿಂದ ಸ್ಪಷ್ಟವಾಗಿರುತ್ತದೆ.

17) ದೂರುದಾರರು ಘನ ಲೋಕಾಯುಕ್ತ ಸಂಸ್ಥೆಯಲ್ಲಿ ತೆರಿಗೆ ವಸೂಲಾತಿ ಮಾಡುತ್ತಿಲ್ಲವೆಂದು, ಲೋಕಾಯುಕ್ತ ಸಂಸ್ಥೆಯಿಂದ ಉತ್ತರ ಕೇಳಿದಾಗ ಮಾತ್ರವೇ ಬಾಕಿ ಉಳಿಸಿಕೊಂಡಿರುವ ತೆರಿಗೆ ಹಣದ ಬಗ್ಗೆ ಮಾಹಿತಿ ನೀಡಿರುವುದನ್ನು ಗಮನಿಸಿದಾಗ ದೂರುದಾರರು ಆರೋಪಿಸಿದಂತೆ ತೆರಿಗೆ ಹಣವನ್ನು ವಸೂಲಿ ಮಾಡದೇ ಮಾಲೀಕರುಗಳು ಜೊತೆ ಶಾಮೀಲಾಗಿರುವುದು ಕಂಡುಬರುತ್ತದೆ.

**4.ಒಟ್ಟಾರೆ ಅಭಿಪ್ರಾಯ:**

ಎಲ್ಲಾ ಅಂಶಗಳ ಪ್ರಕಾರ ಎದುರುದಾರರು ಸಕಾಲದಲ್ಲಿ ತೆರಿಗೆ ಹಣವನ್ನು ವಸೂಲಾತಿ ಮಾಡದೇ ಬಾಕಿ ಉಳಿಸಿಕೊಂಡು ಸರ್ಕಾರದ ವಿವಿಧ ಯೋಜನೆಗಳಿಗೆ ಹಣದ ಕೊರತೆ ಉಂಟು ಮಾಡಿರುವುದು ಮತ್ತು ಗ್ರಾಮ ಪಂಚಾಯಿತಿಯಿಂದ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನದ ಕೊರತೆ ಉಂಟಾಗುವಂತೆ ಮಾಡಿರುವುದು ಸ್ಪಷ್ಟವಾಗಿ ಕಂಡುಬಂದಿರುವುದರಿಂದ ದೂರುದಾರರು ಎದುರುದಾರರ ವಿರುದ್ಧ ಮಾಡಿರುವ ಆಪಾದನೆಯು ಸಾಬೀತಾಗಿರುತ್ತದೆ.

ಮೇಲಿನ ಕಾರಣಗಳಿಂದ ಹಾಗೂ ಕಡತವನ್ನು ಪರಿಶೀಲಿಸಿದಾಗ 1ನೇ ಎದುರುದಾರರಾದ ಶ್ರೀ ಶ್ರೀನಿವಾಸಮೂರ್ತಿ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, (ನಿವೃತ್ತಿ ದಿನಾಂಕ:30-06-2026) ಮತ್ತು 2ನೇ ಎದುರುದಾರರಾದ ಶ್ರೀ ಪದ್ಮನಾಭ.ಡಿ.ಎಂ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೂದಿಹಾಳ್ ಗ್ರಾಮ ಪಂಚಾಯಿತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ನಿವೃತ್ತಿ ದಿನಾಂಕ:30-04-2033) ಇವರುಗಳ ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯನಿಷ್ಠೆಯನ್ನು ತೋರಿಸದೆ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1) (i) ರಿಂದ (iii) ರಲ್ಲಿ ಹೇಳಿದಂತೆ ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿರುತ್ತದೆ ಹಾಗೂ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು

ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಉಪಲೋಕಾಯುಕ್ತರು–2 ರವರಿಗೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ.